## ಕಬ್ಬಿನ ರಸ

ನನ್ನ ಮೂರು ವರ್ಷದ ಮಗ ಪ್ರಣವ್ ಬೆಂಗಳೂರಿನಲ್ಲಿ ಕಬ್ಬಿನ ರಸವನ್ನು ತುಂಬಾ ಇಷ್ಟಪಟ್ಟು ಕುಡಿಯುತ್ತಿದ್ದ. ಅದು ಅವನ ದಿನಚರಿಯಾಗಿತ್ತು. ಯಂತ್ರದಿಂದ ರಸ ಹೊರಬರುವುದನ್ನು ಗಮನವಿಟ್ಟು ನೋಡುತ್ತಿದ್ದ. ರಜೆಗೆ ಅಜ್ಜನ ಮನೆಗೆ ಹೋದಾಗ ಇವನ ಇಷ್ಟವನ್ನರಿತ ಅಜ್ಜ ಸಾಕಷ್ಟು ಕಬ್ಬು ತಂದರು. ನಾನೂ ಸಂಭ್ರಮದಿಂದ ಕಬ್ಬು ಸುಲಿದು ಕೊಡತೊಡಗಿದೆ. ಅದನ್ನು ಜಗಿದು ತಿನ್ನುತ್ತಾ ಪ್ರಣವ್ ಕೇಳಿದ, 'ಅಮ್ಮಾ, ಇದರಲ್ಲಿ ಯಾರೋ ಕಬ್ಬಿನ ರಸವನ್ನು ಹಾಕಿದ್ದಾರೆ ಅನ್ಸುತ್ತೆ! ಯಾರಿರಬಹುದು?' ಎಂದು ಕೇಳಿದಾಗ ನನ್ನ ಮುಖಚರ್ಯೆ ಹೇಗಿರಬಹುದೆಂದು ಊಹಿಸಿ!

**ಅನುಪಮಾ ಕೆ. ಬೆಣಚಿನಮರ್ಡಿ**



## ಓದೋರು ಯಾರು?

ಇದು ಬಹಳ ವರ್ಷಗಳ ಹಿಂದೆ ನಾಗಮಂಗಲದ ಬೆಳ್ಳೂರಿನ ಹತ್ತಿರದ ಹಳ್ಳಿ ದಡಿಗದಲ್ಲಿರುವ ನಮ್ಮ ಅಜ್ಜಿಯ ನೆಂಟರಾದ ಶಾಮಯ್ಯಂಗಾರ್ ಮನೆಗೆ ಹೋದಾಗ ನಡೆದ ಘಟನೆ. ಅಜ್ಜಿ ಹಾಗೂ ಶಾಮಯ್ಯಂಗಾರರು ಲೋಕಾರೂಢಿ ಮಾತಾಡುತ್ತ ಕೂತಿದ್ದಾಗ ಒಬ್ಬ ರೈತ ಬಂದು, 'ಸ್ವಾಮಿ, ತಹಸೀಲ್ದಾರ್ರಿಗೆ ಒಂದು ಅರ್ಜಿ ಬರೆದು ಕೊಡಿ' ಅಂದ. ಇವರು, 'ಬರೀಬೋದಿತ್ತು, ಆದರೆ ಮೊನ್ನೆ ಬಚ್ಚಲ್ ಮನೇಲಿ ಜಾರಿಬಿದ್ದು, ಕಾಲು ಉಳಕೋಗೈತೆ. ನಡೆಯೊಕೆ ಆಗಕಿಲ್ಲ ಕನ' ಅಂದರು. ಅವನು ನಕ್ಕು, 'ಆಯ್ತು ಬುಡಿ, ನಾನೇ ಓಗಿ ಸಾಯಿ, ನಿಬ್ಬು ತತ್ತೀನಿ, ಬರಕೊಡೋವ್ರಂತೆ' ಅಂತ ಎದ್ದ. ಇವರು, 'ತಡೀಲ, ಬರೆದು ಕೊಟ್ಟೇನು. ಅದನ್ನ ಓದೊದು ಯಾರ್ಲ? ನಾನು ಬರೆದಿದ್ದು ನನಗೇ ಓದಾಕಾಗಾಕಿಲ್ಲ. ಕಾಲು ಸರಿ ಆದ ಮೇಲೆ ಆಫೀಸ್ಗೆ ನಾನೇ ಬಂದು ಬರ್ಕೊಟ್ಟು, ಅವರಿಗೆ ಓದಿ ಹೇಳ್ತೀನಿ' ಅಂದರು!

**ಕೆ.ಎಸ್. ಶ್ರೀ ಶೈಲನ್**



ಕಲೆ: ಗಣೇಶ ಆಚಾರ್ಯ